2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).
ಸ್ಪೆಷಲ್ ಕೇಸ್ ಸಂಖ್ಯೆಃ 5028/2023

ಪ್ರಾಸಾ ಃ 1
ಚಾಸಾ ಃ 1

ಸಾಕ್ಷಿಯ ಹೆಸರು ಃ ಅಪ್ಪು

ತಂದೆಯ ಹೆಸರುಃ ಬೊಳಕ

ವಯಸ್ಸು ಃ 35 ವರ್ಷ

ವೃತ್ತಿ ಃ ಕೂಲಿ ಕೆಲಸ

ವಿಳಾಸ ಃ ಮುಕುಟಗೇರಿ ಗ್ರಾಮ

ದಿಃ 15.05.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

1. ಚಾಸಾ 2 ನನ್ನ ತಂದೆ. ಮೃತ ಮೊಣ್ಣೆ ನನ್ನ ಪತ್ನಿ. ಚಾಸಾ 3 ನನ್ನ ಸಾಹುಕಾರರು. ನಾನು ಟಿ ಶೆಟ್ಟಿಗೇರಿಯ ಅಲೆಮಾಡ ಸೋಮಣ್ಣ ರವರ ಲೈನ್ ಮನೆಯಲ್ಲಿ ವಾಸವಾಗಿದ್ದಾಗ ಮೊಣ್ಣೆಯವರ ಪರಿಚಯವಾಗಿ ಆಕೆಯನ್ನು ಮದುವೆ ಆಗಿರುತ್ತೇನೆ. ಈಗ್ಗೆ 3 ವರ್ಷಗಳಿಂದ ಮೊಣ್ಣೆ ಯವರೊಂದಿಗೆ ಚಾಸಾ 3 ರವರ ಕಾಫಿ ತೋಟಕ್ಕೆ ಕೆಲಸಕ್ಕೆ ಬಂದು ಚಾಸಾ 3 ರವರ ಕಾಫಿ ತೋಟದ ಲೈನ್ ಮನೆಯಲ್ಲಿ ನಾನು, ಮೊಣ್ಣೆ ಹಾಗೂ ನನ್ನ ತಂದೆ ವಾಸವಾಗಿದ್ದೆವು. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ, ಆತ ನಾವು ವಾಸವಾಗಿದ್ದ ಪಕ್ಕದ ಲೈನ್ ಮನೆಯಲ್ಲಿ ವಾಸವಾಗಿದ್ದರು. ನಾನು ಹಾಗೂ ಮೊಣ್ಣೆ ಪಣಿಯರವರ ಜನಾಂಗಕ್ಕೆ ಸೇರಿದವರು. ನ್ಯಾಯಾಲಯದ ಮುಂದಿರುವ ಆರೋಪಿ ನಮ್ಮ ಜಾತಿಯವರಲ್ಲ, ದೋಬಿ ಜಾತಿಗೆ ಸೇರಿದವರು.

2. ದಿಃ 18.05.2023 ರಾತ್ರಿ 8.00 ರಿಂದ 9.00 ಗಂಟೆಯ ಸುಮಾರಿಗೆ ಆರೋಪಿಯು ನಾವು ವಾಸವಾಗಿದ್ದ ಲೈನ್ ಮನೆಯ ಬಳಿ ಬಂದು ಮನೆಯ ಹೊರಗಡೆ ಜಗುಲಿಯಲ್ಲಿ ನನ್ನ ತಂದೆಯೊಂದಿಗೆ ಮಾತನಾಡುತ್ತಿದ್ದರು. ಆಗ ನಾನು ಮನೆಯ ಒಳಗಡೆ ಇದ್ದೆ ಹಾಗೂ ನನ್ನ ಪತ್ನಿ ಮನೆಯ ಒಳಗಡೆ ಮಲಗಿದ್ದಳು. ಆಗ ಆರೋಪಿಯು ಮನೆಯ ಒಳಗಡೆ ಬಂದು ಆಕೆ ಯಾಕೆ ಮಲಗಿದ್ದಾಳೆ ಎಂದು ಹೇಳಿ ಆಕೆಯ ಕೈ ಹಿಡಿದು ಎಬ್ಬಿಸಲು ಪ್ರಯತ್ನಿಸಿದರು. ಆಗ ನಾನು ಆರೋಪಿಯನ್ನು ತಳ್ಳಿದೆ. ಆರೋಪಿಯು ಆತನ ಮನೆಯಿಂದ ಎರಡೂ ಕೈಗಳಲ್ಲಿ 2 ಕತ್ತಿಗಳನ್ನು ಹಿಡಿದುಕೊಂಡು ಬಂದು ನನ್ನ ತಂದೆಯ ಬಳಿ ಅಯ್ಯ ನಿಮ್ಮನ್ನು ಏನೂ ಮಾಡುವುದಿಲ್ಲ, ಅವರನ್ನು ಮಾತ್ರ ಬಿಡುವುದಿಲ್ಲ ಎಂದು ಹೇಳಿ, ಬೋಳಿ ಮಕ್ಕಳೇ ನಿಮ್ಮನ್ನು ಇವತ್ತು ಬಿಡುವುದಿಲ್ಲ ಎಂದು ಹೇಳಿದ್ದು ಆಗ ಮೊಣ್ಣೆ ನೀವು ಯಾಕೇ ಗಲಾಟೆ ಮಾಡುತ್ತೀರಿ ಎಂದು ಹೇಳಿದ್ದು, ಆಗ ಆರೋಪಿಯು ನಿಮ್ಮನ್ನು ಇಬ್ಬರನ್ನು ಬಿಡುವುದಿಲ್ಲ ಎಂದು ಹೇಳಿ ನನಗೆ ಕತ್ತಿ ಬೀಸಿದ್ದು ನಾನು ತಪ್ಪಿಸಿಕೊಂಡು ಮನೆಯ ಒಳಗಡೆ ನುಗ್ಗಿ ಬಾಗಿಲು ಹಾಕಿದೆ, ನಂತರ ಬಾತ್ ರೂಮ್ ಕಿಟಕಿಯಿಂದ ದಾಟಿ ಹೊರಗೆ ಬಂದಿದ್ದು, ಆಗ ಮೊಣ್ಣೆಯ ಕೈಯಲ್ಲಿ ಟಾರ್ಚ್ ಇದ್ದುದನ್ನು ನೋಡಿದೆ. ಆಗ ಆರೋಪಿಯು ಕತ್ತಿಯಿಂದ ಮೊಣ್ಣೆಯ ಕುತ್ತಿಗೆಗೆ ಹಲ್ಲೆ ಮಾಡಿರುತ್ತಾನೆ, ಆ ಕೂಡಲೇ ಮೊಣ್ಣೆ ಕುಸಿದು ಬಿದ್ದರು. ಆರೋಪಿಯು ನನಗೆ ಹೊಡೆಯಲು ಮುಂದಾಗಿದ್ದು ನಾನು ತಪ್ಪಿಸಿಕೊಂಡು ಓಡಿ ಹೋದೆ.

ಆ ಕೂಡಲೇ ನಾನು ಸಾಹುಕಾರರ ಮನೆಗೆ ಓಡಿ ಹೋಗಿ ಅವರಿಗೆ ವಿಚಾರ ತಿಳಿಸಿದೆ. ಕೂಡಲೇ ಸಾಹುಕಾರರು ಪೊ. ಠಾಣೆಗೆ ಹೋಗಿ ಮಾಹಿತಿ ನೀಡಿದರು. ಸಾಹುಕಾರರ ಪತ್ನಿ ಹಾಗೂ ಮಗ ನಾವು ವಾಸವಾಗಿದ್ದ ಲೈನ್ ಮನೆಗೆ ಬಂದು ಮೊಣ್ಣಿಯನ್ನು ನೋಡಿದರು. ಮೊಣ್ಣಿಯನ್ನು ಮನೆಯ ಪಕ್ಕದ ಅಂಗಳದಲ್ಲಿ ಬಿದ್ದಿತ್ತು. ನಾನು ಆಕೆಯನ್ನು ತಂದು ಜಗಲಿಯಲ್ಲಿ ಮಲಗಿಸಿದೆ. ನಂತರ ಮೊಣ್ಣಿಯನ್ನು ಅಂಬುಲೆನ್ಸ್ ನಲ್ಲಿ ಗೋಣಿಕೊಪ್ಪ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇವೆ. ಅಲ್ಲಿ ವೈದ್ಯರು ಪರೀಕ್ಷೆ ಮಾಡಿ ಮೊಣ್ಣಿ ಮೃತಪಟ್ಟಿರುತ್ತಾರೆ ಎಂದು ಹೇಳಿದರು. ನಾನು ಮಾರನೇ ದಿನ ಬೆಃ 7.00 ಗಂಟೆಗೆ ದೂರು ನೀಡಿರುತ್ತೇನೆ. ನಾನು ಮೇಲೆ ಹೇಳಿದ ವಿವರಗಳನ್ನು ಹೇಳಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

3. ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದು ನಾನು ಘಟನಾ ಸ್ಥಳವನ್ನು ಪೊಲೀಸರಿಗೆ ಪಂಚರ ಸಮಕ್ಷಮ ತೋರಿಸಿದ್ದು ಪೊಲೀಸರು ಸ್ಥಳ ಮಹಜರು ಮಾಡಿದ್ದರು ಹಾಗೂ ಘಟನಾ ಸ್ಥಳದಿಂದ ಸಾದಾ ಮಣ್ಣು, ರಕ್ತ ಮಿಶ್ರಿತ ಮಣ್ಣನ್ನು ಹಾಗೂ ಟಾರ್ಚನ್ನು ಜಪ್ತು ಮಾಡಿ ಒಂದು ಕವರಿಗೆ ಹಾಕಿದ್ದರು. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ರಕ್ತ ಮಿಶ್ರಿತ ಮಣ್ಣನ್ನು ಈಗ ನೋಡುತ್ತಿದ್ದು ಅದನ್ನು

ಮು ಮಾ 1 ಎಂದು , ಸಾದಾ ಮಣ್ಣನ್ನು ಈಗ ನೋಡುತ್ತಿದ್ದು ಅದನ್ನು ಮು ಮಾ 2 ಎಂದು ಮತ್ತು ಟಾರ್ಚನ್ನು ಈಗ ನೋಡುತ್ತಿದ್ದು ಅದನ್ನು ಮು ಮಾ 3 ಎಂದು ಗುರುತಿಸಲಾಯಿತು. ಆರೋಪಿ ಕೃತ್ಯಕ್ಕೆ ಉಪಯೋಗಿಸಿದ ಕತ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಸಮಕ್ಷಮ ಒಂದು ಕೊಕ್ಕೆ ಕತ್ತಿ ಹಾಗೂ ಒಂದು ಮಂಡೆ ಕತ್ತಿ ಇದ್ದು, ಸಾಕ್ಷಿಯು ಆರೋಪಿ ಮೊಣ್ಣಿಗೆ ಕೊಕ್ಕೆ ಕತ್ತಿಯಿಂದ ಕಡಿದಿದ್ದಾರೆ ಎಂದು ಹೇಳಿ ಕತ್ತಿಯನ್ನು ಗುರುತಿಸಿದ್ದು ಅದನ್ನು ಮು ಮಾ 4 ಎಂದು ಗುರುತಿಸಲಾಯಿತು. ಮಂಡೆ ಕತ್ತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮಾ 5 ಎಂದು ಗುರುತಿಸಲಾಯಿತು.

4. ಪೊಲೀಸರು ಮಹಜರು ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿದ್ದರು. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 2 ಎಂದು ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಮಹಜರು ಮಾಡುವ ಸಮಯದಲ್ಲಿ ಪೊಲೀಸರು ಛಾಯಾಚಿತ್ರಗಳನ್ನು ತೆಗೆದಿದ್ದು ಅವುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ 3 ರಿಂದ 8 ಎಂದು ಗುರುತಿಸಲಾಯಿತು. ನಿಪಿ 4 ಛಾಯಾಚಿತ್ರದಲ್ಲಿ ರಕ್ತದ ಕಲೆಗಳು ಕಾಣಿಸುತ್ತಿವೆ. ನಿಪಿ 4 ರಲ್ಲಿ ನಾನು, ಕುಮಾರ, ಹಾಗೂ ಸಾಹುಕಾರರ ಮಗ ಪೂವಣ್ಣ ಹಾಗೂ ಪೊಲೀಸರು ಕಾಣಿಸುತ್ತಿದ್ದೇವೆ. ನಿಪಿ 5 ರಲ್ಲಿ ಪೊಲೀಸರು ಮಣ್ಣು ಸಂಗ್ರಹಿಸುತ್ತಿರುವುದು ಕಾಣಿಸುತ್ತಿದೆ. ನಿಪಿ 7 ರಲ್ಲಿ ಆರೋಪಿಯು ನಾನು

ಕೋಣೆಯ ಒಳಗಡೆ ಇದ್ದಾಗ ಬಾಗಿಲಿಗೆ ಹೊಡೆದಿರುವ ಗುರುತು ಕಾಣಿಸುತ್ತಿದೆ. ನಿಪಿ 8 ರಲ್ಲಿ ಬಾತ್ ರೂಮ್ ಕಾಣಿಸುತ್ತಿದೆ, ನಾನು ಸದರಿ ಬಾತ್ ರೂಮ್ ನ ಕಿಟಕಿಯಿಂದ ಹೊರಗಡೆ ಹೋಗಿದ್ದೆ. ನನ್ನ ಪತ್ನಿ ಮೊಣ್ಣಿಯ ಮೃತ ದೇಹದ ಛಾಯಾಚಿತ್ರಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಛಾಯಾಚಿತ್ರಗಳನ್ನು ಕ್ರಮವಾಗಿ ನಿಪಿ 9 ರಿಂದ 12 ಎಂದು ಗುರುತಿಸಲಾಯಿತು. ನಿಪಿ 10 ರಲ್ಲಿ ನನ್ನ ಪತ್ನಿಯ ಕುತ್ತಿಗೆಗೆ ಕಡಿದ ಗಾಯ ಕಾಣಿಸುತ್ತಿದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

5. ನಾನು ಹೆದರಿ ತಪ್ಪಿಸಿಕೊಂಡು ಮನೆಯ ಒಳಗಡೆ ಓಡಿ ಬಾಗಿಲನ್ನು ಹಾಕಿ ಒಳಗಿನಿಂದ ಚಿಲಕವನ್ನು ಹಾಕಿದ್ದು ಅಷ್ಟರಲ್ಲಿ ಆರೋಪಿ ಕತ್ತಿಯಿಂದ ಬಾಗಿಲಿಗೆ ಕಡಿದು ಬಾಗಿಲನ್ನು ದೂಡಿ ಒಳಗೆ ನುಗ್ಗಿ ನನಗೆ ಕಡಿಯಲು ಬಂದಾಗ ನಾನು ತಪ್ಪಿಸಿಕೊಂಡು ಬಾತ್ ರೂಮ್ ಒಳಗಡೆ ಓಡಿ ಹೋಗಿ ಒಳಗಿನಿಂದ ಚಿಲಕ ಹಾಕಿ ಕಿಟಕಿಯ ಮೂಲಕ ಹೊರಗೆ ಇಳಿದು ಸಾಹುಕಾರರ ಮನೆಗೆ ಓಡಿ ಹೋಗಿ ವಿಚಾರ ತಿಳಿಸಿದ್ದೆ ಎಂದರೆ ಸರಿ. ಆರೋಪಿ ನನ್ನ ಪತ್ನಿಗೆ ಹಲ್ಲೆ ಮಾಡಿದಾಗ ರಾತ್ರಿ 10.15 ಗಂಟೆ ಸಮಯ ಆಗಿತ್ತು ಎಂದರೆ ಸರಿ. ನಾನು ಸಾಹುಕಾರರ ಮನೆಗೆ ಹೋಗಿ

ವಿಚಾರ ತಿಳಿಸಿ, ನಾನು ಹಾಗೂ ಸಾಹುಕಾರರು ಲೈನ್ ಮನೆಗೆ ಬಂದು ನೋಡಿದಾಗ ಮೊಣ್ಣಿಯು ಮನೆಯ ಹೊರಗೆ ಅಂಗಳದಲ್ಲಿ ಬಿದ್ದಿದ್ದು ನಾನು ಆಕೆಯನ್ನು ಎತ್ತಿ ಮನೆಯ ಜಗಲಿಯಲ್ಲಿ ಮಲಗಿಸಿದ್ದೆ ಎಂದರೆ ಸರಿ. ಆಗ ಸಾಹುಕಾರರು ಅಂಬುಲೆನ್ಸ್ ನ್ನು ಕರೆಸಿದ್ದು ನಾನು ಹಾಗೂ ಸಾಹುಕಾರರು ಮೊಣ್ಣಿಯನ್ನು ಅಂಬುಲೆನ್ಸ್ ನಲ್ಲಿ ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆರೆ ಕರೆದುಕೊಂಡು ಹೋಗಿದ್ದೆವು ಹಾಗೂ ಆಕೆ ಮಾರ್ಗ ಮಧ್ಯದಲ್ಲಿ ಮರಣಹೊಂದಿದರು ಎಂದರೆ ಸರಿ. ಆರೋಪಿಗೆ ಮದ್ಯ ಸೇವಿಸುವ ಅಭ್ಯಾಸ ಇತ್ತು ಎಂದರೆ ಸರಿ. ಘಟನೆ ನಡೆಯುವ ಮೊದಲು ಆರೋಪಿ ಪ್ರತಿನಿತ್ಯ ಮದ್ಯಪಾನ ಮಾಡಿಕೊಂಡು ನನ್ನೊಂದಿಗೆ ಜಗಳ ಮಾಡುತ್ತಿದ್ದು ಆಗ ನನ್ನ ಪತ್ನಿ ಮೊಣ್ಣಿ ಸಮಾಧಾನ ಮಾಡುತ್ತಿದ್ದು ಆರೋಪಿಯು ಆಕೆಯೊಂದಿಗೂ ಕೂಡ ಜಗಳ ಮಾಡುತ್ತಿದ್ದರು ಹಾಗೂ ಈ ವಿಚಾರವನ್ನು ಸಾಹುಕಾರರ ಬಳಿ ಹೇಳಿದಾಗ ಅವರು ಆರೋಪಿಗೆ ಜೋರು ಮಾಡಿ ನನಗೆ ಹಾಗೂ ಮೊಣ್ಣಿಗೆ ತೊಂದರೆ ಕೊಡದಂತೆ ಎಚ್ಚರ ನೀಡುತ್ತಿದ್ದರು ಎಂದರೆ ಸರಿ. ಘಟನೆಯ ದಿನ ಆರೋಪಿಯು ನನ್ನನ್ನು ಕಡಿಯಲು ಬಂದಾಗ ಮೊಣ್ಣಿ ತಡೆಯಲು ಪ್ರಯತ್ನಿಸಿದ್ದು ಆಗ ಆರೋಪಿಯು ನಿನ್ನನ್ನು ಮೊದಲು ಮುಗಿಸಿದರೆ ಎಲ್ಲಾ ಸರಿ ಆಗುತ್ತದೆ ಎಂದು ಹೇಳಿ ಕೊಲೆ ಮಾಡುವ ಉದ್ದೇಶದಿಂದ ತನ್ನ ಕೈಯಲ್ಲಿದ್ದ ಕತ್ತಿಯಿಂದ ಮೊಣ್ಣಿಯ ಕುತ್ತಿಗೆಯ ಭಾಗಕ್ಕೆ ಕಡಿದು ಕೊಲೆ ಮಾಡಿದ್ದು, ಮೊಣ್ಣಿಯ ಕೈಯಲ್ಲಿ ಟಾರ್ಚ್ ಬೆಳಕು ಇದ್ದಿದ್ದರಿಂದ ಆ ಬೆಳಕಿನಲ್ಲಿ ನಾನು ಆರೋಪಿ ಮೊಣ್ಣಿಗೆ ಕತ್ತಿಯಲ್ಲಿ ಕಡಿದಿದ್ದನ್ನು ಚೆನ್ನಾಗಿ ನೋಡಿದ್ದೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

6. ನಿಪಿ 1 ನ್ನು ಪೊನ್ನಂಪೇಟೆಯಲ್ಲಿ ಟೈಪ್ ಮಾಡಿಸಲಾಗಿದೆ, ನಿಖರವಾಗಿ ಯಾವ ಜಾಗದಲ್ಲಿ ಎಂದು ನನಗೆ ಗೊತ್ತಿಲ್ಲ. ನಿಪಿ 1 ನ್ನು ಬೆಃ 6.45 ಗಂಟೆಗೆ ಟೈಪ್ ಮಾಡಿಸಿದ್ದೇನೆ. ನಿಪಿ 1 ನ್ನು ಎಲ್ಲಿ, ಯಾರು ಟೈಪ್ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 1 ನ್ನು ನಾನು ಹೇಳಿದ ರೀತಿಯಲ್ಲಿ ಟೈಪ್ ಮಾಡಿರುತ್ತಾರೆ. ನಿಪಿ 1 ನ್ನು ಓದಿ ತಿಳಿದುಕೊಂಡಿದ್ದೇನೆ. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಅಲೆಮಾಡ ಸೋಮಣ್ಣ ರವರ ತೋಟದಲ್ಲಿ 2 ವರ್ಷ ಕೆಲಸ ಮಾಡಿದ್ದೆ. ಶಂಕರ ಹಾಗೂ ಆತನ ಪತ್ನಿ ಮೊಣ್ಣಿ ಅಲ್ಲಿ ವಾಸವಾಗಿದ್ದರು ಎಂದರೆ ಸರಿ. ಶಂಕರ ಆಗಾಗ ಮದ್ಯ ಸೇವಿಸಿ ಮೊಣ್ಣಿಯೊಂದಿಗೆ ಗಲಾಟೆ ಮಾಡುತ್ತಿದ್ದರು ಎಂದರೆ ಸರಿ. ಆ ಗಲಾಟೆಯನ್ನು ಸಮಾಧಾನ ಮಾಡಲು ನಾನು ಮೊಣ್ಣಿ ಹಾಗೂ ಶಂಕರ ವಾಸವಾಗಿದ್ದ ಮನೆಗೆ ಆಗಾಗ ಹೋಗುತ್ತಿದ್ದೆ ಎಂದರೆ ಸರಿ. ನಾನು ಆಗಾಗ ಅವರ ಮನೆಗೆ ಹೋಗುತ್ತಿದ್ದ ಕಾರಣ ನನ್ನ ಹಾಗೂ ಮೊಣ್ಣಿಯ ಮಧ್ಯ ಸ್ನೇಹ ಉಂಟಾಗಿ ನಂತರ ನಾವು ಪ್ರೀತಿಸುತ್ತಿದ್ದೆವು ಎಂದರೆ ಸರಿ. ನಾನು ಶಂಕರನ ಮನೆಯಿಂದ ಮೊಣ್ಣಿಯನ್ನು ಕರೆದುಕೊಂಡು ಬಂದು ಚಾಸಾ 3 ರವರ ಮನೆಯಲ್ಲಿ ವಾಸವಾಗಿದ್ದೆ ಎಂದರೆ ಸರಿ. ಶಂಕರ ಹಾಗೂ ಮೊಣ್ಣಿಗೆ ಇಬ್ಬರು ಮಕ್ಕಳು ಇದ್ದರು, ಅವರ ವಯಸ್ಸು 12 ವರ್ಷ ಹಾಗೂ 9 ವರ್ಷ. ಶಂಕರ ಹಾಗೂ ಮೊಣ್ಣಿ ರವರ ಮಧ್ಯ ವಿವಾಹ ವಿಚ್ಛೇದನ ಆಗಿರಲಿಲ್ಲ.

7. ನಾನು ಹಾಗೂ ಮೊಣ್ಣಿ ಚಾಸಾ 3 ರವರ ಲೈನ್ ಮನೆಯಲ್ಲಿ ಎರಡುವರೆ ವರ್ಷ ಸಂಸಾರ ಮಾಡಿದ್ದೆವು. ಶಂಕರ ರವರಿಗೆ ನಾನು ಮೊಣ್ಣಿಯನ್ನು ಕರೆದುಕೊಂಡು ಬಂದು ಚಾಸಾ 3 ರವರ ಮನೆಯಲ್ಲಿ ವಾಸವಿದ್ದ ಬಗ್ಗೆ ನನ್ನ ಮೇಲೆ ಸಿಟ್ಟಿತ್ತು ಎಂದರೆ ಸರಿ. ಅಲೆಮಾಡ ಸೋಮಣ್ಣ ರವರ ಲೈನ್ ಮನೆ ಹಾಗೂ ಚಾಸಾ 3 ರವರ ಲೈನ್ ಮನೆ ಮಧ್ಯ ಸುಮಾರು 70 ಅಡಿ ಅಂತರ ಇದ್ದಿರಬಹುದು. ನಾನು ಹಾಗೂ ಮೊಣ್ಣಿ ಚಾಸಾ 3 ರವರ ಲೈನ್ ಮನೆಯಲ್ಲಿ ವಾಸವಿದ್ದುದನ್ನು ಶಂಕರ ನೋಡುತ್ತಿದ್ದರು ಎಂದರೆ ಸರಿ. ನನಗೆ ಮೊದಲು ಮದುವೆಯಾಗಿದ್ದು, ಆಕೆ ನನ್ನನ್ನು ಬಿಟ್ಟು ಹೋಗಿದ್ದರು. ನಮಗೆ ಕಾನೂನು ಬದ್ಧವಾಗಿ ವಿವಾಹ ವಿಚ್ಛೇದನ ಆಗಿಲ್ಲ.

8. ನಾನು ನಿಪಿ 1 ರಲ್ಲಿ ಮೊಣ್ಣಿಯವರು ಶಂಕರನೊಂದಿಗೆ ವಿವಾಹ ವಿಚ್ಛೇದನೆ ಪಡೆಯದೇ ಮೊಣ್ಣಿಯನ್ನು ಅಕ್ರಮವಾಗಿ ನನ್ನೊಂದಿಗೆ ಕರೆದುಕೊಂಡು ಬಂದಿದ್ದೆ ಎಂದು ಹೇಳಿರುವುದಿಲ್ಲ. ಆ ದಿನ ನಾನು ಮನೆಯಲ್ಲಿ ಇದ್ದೆ. ಆ ದಿನ ನನ್ನ ತಂದೆ ಕೂಡ ನಮ್ಮ ಜೊತೆ ಮನೆಯಲ್ಲಿ ಇದ್ದರು. ಆ ದಿನ ನಮ್ಮ ಮನೆಯಲ್ಲಿ ನಾನು, ಮೊಣ್ಣಿ, ನನ್ನ ತಂದೆ ಇದ್ದು ಪಕ್ಕದ ಮನೆಯಲ್ಲಿ ಆರೋಪಿ ಇದ್ದರು. ನಮ್ಮ ಮನೆಯ ಹತ್ತಿರ 4 ಲೈನ್ ಮನೆಗಳು ಇವೆ. ಸದರಿ ಲೈನ್ ಮನೆಗಳಲ್ಲಿ ಚಾಸಾ 3 ರವರ ಕೆಲಸಗಾರರು ವಾಸವಾಗಿದ್ದಾರೆ ಎಂದರೆ ಸರಿ. ನಮ್ಮ ಮನೆಯಲ್ಲಿ ಒಂದು ಕೋಣೆ ಇದ್ದು, ಪಕ್ಕದಲ್ಲಿ ಒಂದು ಬಾತ್ ರೂಮ್ ಇದೆ. ಸದರಿ

ಮನೆಯ ವಿಸ್ತೀರ್ಣ ಎಷ್ಟು ಎಂದು ನನಗೆ ಹೇಳಲು ಆಗುವುದಿಲ್ಲ. ಬಾತ್ ರೂಮ್ ಸುಮಾರು 5 ಅಡಿ ಉದ್ದ, ಅಗಲ ಇದೆ. ನಮ್ಮ ಮನೆಗೆ 2 ಕಿಟಕಿಟಳು ಇದ್ದು, ಒಂದು ಬಾಗಿಲು ಇದೆ. ನಮ್ಮ ಮನೆಯ ಕಿಟಕಿಗಳ ಪೈಕಿ ಒಂದು ಮರದ್ದು ಹಾಗೂ ಇನ್ನೊಂದು ಗ್ಲಾಸಿನದ್ದು. ಸದರಿ ಕಿಟಕಿಯ ಪಟ್ಟಿ ಮರದ್ದಾಗಿದ್ದು, ಅದಕ್ಕೆ ಬಾಗಿಲುಗಳು ಗ್ಲಾಸಿನದ್ದಾಗಿರುತ್ತವೆ. ಸಾಕ್ಷಿ ಪುನಃ ನುಡಿಯುತ್ತಾರೆ ಒಂದು ಕಿಟಕಿಗೆ ಕಬ್ಬಿಣದ ರಾಡಗಳು ಹಾಕಿರುತ್ತಾರೆ, ಬಾತ್ ರೂಮಿನ ಕಿಟಕಿಗೆ ಅಡ್ಡಲಾಗಿ ಗ್ಲಾಸ್ ಅಳವಡಿಸಿರುತ್ತಾರೆ. ಆ ದಿನ ಪೂರ್ತಿ ನನ್ನ ತಂದೆ ನನ್ನ ಜೊತೆ ಇದ್ದರು. ಆ ದಿನ ರಾತ್ರಿ ಸುಮಾರು 9.30 ಗಂಟೆಗೆ ಊಟ ಮಾಡಿದ್ದೆವು. ಸಾಮಾನ್ಯವಾಗಿ ರಾತ್ರಿ 9.30-9.45 ಗಂಟೆಗೆ ನಾವು ಊಟ ಮಾಡುತ್ತೇವೆ. ನನ್ನ ತಂದೆಗೆ ಕಣ್ಣು ಕಾಣುವುದಿಲ್ಲ. ಅವರ ನಿತ್ಯ ಕರ್ಮಗಳನ್ನು ಅವರೇ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ಆ ದಿನ ನನ್ನ ತಂದೆ ಜಗಲಿಯ ಮೇಲೆ ಕುಳಿತಿದ್ದರು. ನಾನು ನಿಪಿ 1 ದೂರಿನಲ್ಲಿ ನನ್ನ ತಂದೆ ಎಲ್ಲಿ ಕುಳಿತಿದ್ದರು ಎಂದು ನಮೂದು ಮಾಡಿದ್ದೇನೆ. ಪೊಲೀಸರು ನನ್ನ ತಂದೆಯನ್ನು ವಿಚಾರಿಸಿದ್ದು, ನನ್ನ ತಂದೆಯವರು ನನಗೆ ಕಣ್ಣು ಕಾಣಿಸುವುದಿಲ್ಲ ಎಂದು ಹೇಳಿದ್ದರು. ಪೊಲೀಸರು ನನ್ನ ತಂದೆಯನ್ನು ಏನು ವಿಚಾರಣೆ ಮಾಡಿದ್ದಾರೆ ಎಂದು ನಾನು ಕೇಳಿಲ್ಲ. ಆರೋಪಿ ಎಲ್ಲಿಯವರು ಹಾಗೂ ಏನು ಮಾಡುತ್ತಿದ್ದರು ಎನ್ನುವ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ನಮ್ಮ ಸಾಹುಕಾರರು ಆರೋಪಿಯ ಬಗ್ಗೆ ಮಾಹಿತಿಯನ್ನು ನೀಡಿದ್ದರು. ಆರೋಪಿ ಮೊದಲು

ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ಗೊತ್ತಿರಲಿಲ್ಲ, ಸಾಕ್ಷಿಯು ಮುಂದುವರಿದು ಅವರು ನಾವು ಕೆಲಸ ಮಾಡುತ್ತಿದ್ದ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿ ನಮ್ಮ ಸಾಹುಕಾರರ ಲೈನ್ ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದು ನಾನು ಪೊಲೀಸರ ಸಮಕ್ಷಮ ಹೇಳಿರುತ್ತೇನೆ. ಆ ದಿನ ಚಾಸಾ 3 ರವರ ತೋಟದಲ್ಲಿ ನಾನು ಹಾಗೂ ಆರೋಪಿ ಕೆಲಸ ಮಾಡಿದ್ದೆವು. ನನ್ನ ತಂದೆಯವರು ತೋಟದಲ್ಲಿ ಕೆಲಸ ಮಾಡಿರಲಿಲ್ಲ. ಆ ದಿನ ಸಂಜೆ 7.30 ಗಂಟೆಯ ಸುಮಾರಿಗೆ ನಾನು ಹಾಗೂ ಆರೋಪಿ ಒಳ್ಳೆಯ ರೀತಿಯಲ್ಲಿ ಮಾತನಾಡಿದ್ದೆವು. ಮಾಮೂಲು ಕೆಲಸದ ಬಗ್ಗೆ ಮಾತನಾಡಿದ್ದೆವು. ನಾನು ಆರೋಪಿಯಿಂದ ಹಣ ಪಡೆದುಕೊಳ್ಳುತ್ತಿದ್ದೆ ಹಾಗೂ ಆರೋಪಿ ಕೂಡ ನನ್ನಿಂದ ಹಣ ಪಡೆದುಕೊಳ್ಳುತ್ತಿದ್ದರು. ನಾನು ಹಾಗೂ ಆರೋಪಿ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಿದ್ದು ಹಾಗೂ ನಮ್ಮ ನಡುವೆ ಹಣದ ವ್ಯವಹಾರ ಇದ್ದ ಬಗ್ಗೆ ನಿಪಿ 1 ರಲ್ಲಿ ಹಾಗೂ ಪೊಲೀಸರ ಸಮಕ್ಷಮ ನೀಡಿದ ಹೇಳಿಕೆಯಲ್ಲಿ ನಾನು ಹೇಳಿರುವುದಿಲ್ಲ. ಈ ಮಾಹಿತಿಗಳನ್ನು ಪೊಲೀಸರಿಗೆ ಹೇಳಲು ನನಗೆ ತೊಂದರೆ ಇರಲಿಲ್ಲ.

9. ನಮ್ಮ ಮನೆಯಿಂದ ಚಾಸಾ 3 ರವರ ಮನೆ ಸುಮಾರು 100 ಅಡಿ ಅಂತರದಲ್ಲಿ ಇದೆ. ಒಂದು ಖಾಲಿ ಜಾಗದಲ್ಲಿ ಸಮಾನ ಅಂತರದಲ್ಲಿ 100 ಅಡಿ ದೂರದಲ್ಲಿ ಚಾಸಾ 3 ರವರ ಮನೆ ಇದೆ ಎಂದರೆ ಸರಿ. ನಮ್ಮ ಮನೆಯಲ್ಲಿ ಮಾತನಾಡಿದರೆ ಚಾಸಾ 3 ರವರ ಮನೆಗೆ ಕೇಳಿಸುತ್ತದೆ ಎಂದರೆ ಸರಿ. ಚಾಸಾ 3 ರವರ ಮನೆಯಲ್ಲಿ ಚಾಸಾ 3 ಹಾಗೂ ಅವರ

ಪತ್ನಿ ವಾಸವಾಗಿದ್ದಾರೆ. ಅವರ ಮನೆಯಲ್ಲಿ ನಾಯಿ ಸಾಕಿದ್ದಾರೆ ಎಂದರೆ ಸರಿ. ನಾನು ಚಾಸಾ 3 ರವರ ಮನೆಗೆ ಹೋಗಿ ಹೇಳಿದ ತಕ್ಷಣ ಚಾಸಾ 3 ರವರು ನಮ್ಮ ಮನೆಗೆ ಬಂದಿದ್ದರು. ನಮ್ಮ ಮನೆಯ ಒಳಗೆ ಹಾಗೂ ಹೊರಗೆ ವಿದ್ಯುತ್ ದೀಪ ಇದೆ. ಸಾಮಾನ್ಯವಾಗಿ ಕೊಡಗಿನಲ್ಲಿ ವಿದ್ಯುತ್ ಕಡಿತ ಇರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ಕರೆಂಟ್ ಇರಲಿಲ್ಲ. ನಮ್ಮ ಮನೆಯ ಮುಂದೆ ಇದ್ದ ಜಗಲಿ 6 ಅಡಿ ಉದ್ದ, ಆಗಲ ಸುಮಾರು ನಾಲ್ಕುವರೆ ಅಡಿ ಇದೆ. ಅಲ್ಲಿ ಪಕ್ಕದ ಲೈನ್ ಮನೆಗೆ ಬಂದು ಕುಳಿತುಕೊಂಡು ಮಾತನಾಡಿ ಹೋಗುವುದು ವಾಡಿಕೆ ಎಂದರೆ ಸರಿ. ಆ ದಿನ ಸಂಜೆ ಕೂಡ ಅಕ್ಕಪಕ್ಕದ ಲೈನ್ ಮನೆಯವರು ಬಂದು ಮಾತನಾಡಿ ಹೋಗಿದ್ದರು ಎಂದರೆ ಸಾಕ್ಷಿ ನುಡಿಯುತ್ತಾರೆ ಆರೋಪಿ ಮಾತ್ರ ಬಂದಿದ್ದರು, ಬೇರೆ ಯಾರೂ ಬಂದಿರಲಿಲ್ಲ. ಮುಖ್ಯ ರಸ್ತೆಯಿಂದ ಮೊದಲು ಸಾಹುಕಾರರ ಮಗನ ಮನೆ ಸಿಗುತ್ತದೆ, ಕೊನೆಗೆ ಸಾಹುಕಾರರ ಮನೆ ಸಿಗುತ್ತದೆ. ಸಾಹುಕಾರರ ಮಗನ ಮನೆಯಿಂದ ಸಾಹುಕಾರರ ಮನೆ ಎಷ್ಟು ಅಂತರದಲ್ಲಿ ಇದೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ.

10. ನನಗೆ ಹಾಗೂ ಮೊಣ್ಣಿಗೆ ಮದ್ಯಪಾನ ಮಾಡುವ ಅಭ್ಯಾಸ ಇದೆ ಎಂದರೆ ಸರಿ. ಶಂಕರನ ಪತ್ನಿ ಮೊಣ್ಣಿಯನ್ನು ನಾನು ಕರೆದುಕೊಂಡು ಬಂದ ಕಾರಣ, ಆ ಬಗ್ಗೆ ನನ್ನ ಮನೆಯ ಹತ್ತಿರವಾಗಲೀ ಅಥವಾ ಪೇಟೆಯಲ್ಲಾಗಲೀ ನನ್ನ ಮತ್ತು ಶಂಕರನ ಮಧ್ಯ ಯಾವುದೇ

ಮಾತುಕತೆ ಆಗಿಲ್ಲ. ನಾನು ಮೊಣ್ಣಿಯನ್ನು ಅಪಹರಿಸಿಕೊಂಡು ಬಂದ ಕಾರಣ ಶಂಕರನಿಗೆ ನನ್ನ ಹಾಗೂ ಮೊಣ್ಣಿಯ ಮೇಲೆ ಸಿಟ್ಟಿತ್ತು ಎಂದರೆ ಸರಿ. ನಾನು ಮದ್ಯಪಾನ ಮಾಡಲು ಆರೋಪಿಯಿಂದ ಹಣ ಪಡೆದುಕೊಂಡು ಆತನಿಗೆ ಹಿಂದಿರುಗಿಸದೇ ಇದ್ದು, ಆರೋಪಿಯು ಪದೇ ಪದೇ ಬಂದು ಹಣ ಹಿಂತಿರುಗಿಸಲು ಕೇಳಿದ್ದ ಕಾರಣ ನಾನು ಸಂಚು ರೂಪಿಸಿ ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಶಂಕರ ಕೃತ್ಯ ಎಸಗಿದ್ದಾರೆ ಎಂದು ಗೊತ್ತಿದ್ದರೂ ಕೂಡ ಮೊಣ್ಣಿಯನ್ನು ನಾನು ಅಪಹರಿಸಿಕೊಂಡು ಬಂದಿದ್ದು, ಶಂಕರ ನನ್ನ ವಿರುದ್ಧ ಏನಾದರೂ ಕಾನೂನು ಕ್ರಮ ಕೈಗೊಳ್ಳಬಹುದು ಎಂಬ ಕಾರಣದಿಂದ ನಾನು ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

11. ಪೊಲೀಸರು ಗುರುವಾರ ರಾತ್ರಿ 10.45 ಗಂಟೆಗೆ ಬಂದಿದ್ದರು. ಪೊಲೀರು ನಿಪಿ 2 ಮಹಜರನ್ನು ಶುಕ್ರವಾರ ಬೆಳಿಗ್ಗೆ ಸುಮಾರು 10.00 ಗಂಟೆಗೆ ತಯಾರು ಮಾಡಿರುತ್ತಾರೆ. ನಿಪಿ 2 ರ ಮೇಲೆ ನಾನು ಪೊ. ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸಾಹುಕಾರರು ಹಾಗೂ ಅವರ ಮಗ ಮತ್ತು ಪೊಲೀಸರು ಹೊರತುಪಡಿಸಿ ಬೇರೆ ಯಾರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ 3, 5, 6 ಹಾಗೂ 8 ರಲ್ಲಿ ಆರೋಪಿ ಕಾಣಿಸುತ್ತಿಲ್ಲ. ನಾನು ಮೊದಲು ಮನೆಯ ಒಳಗಡೆ ಓಡಿದೆ. ಮನೆಯ ಬಾಗಿಲು ಗಟ್ಟಿಮುಟ್ಟಾಗಿದೆ ಎಂದರೆ ಸರಿ. ಬಾತ್ ರೂಮಿನ ಬಾಗಿಲು

ಕೂಡ ಗಟ್ಟಿಮುಟ್ಟಾಗಿದೆ ಎಂದರೆ ಸರಿ. ನಾನು ಮನೆಯ ಕೋಣೆಯಲ್ಲಿ ಒಂದು ಸೆಕೆಂಡ್ ಕೂಡ ನಿಂತಿರಲಿಲ್ಲ, ಬಾತ್ ರೂಮಿಗೆ ಓಡಿ ಹೋಗಿದ್ದೆ. ಅಲ್ಲಿ ಪೂರ್ಣ ಕತ್ತಲಾಗಿತ್ತು, ಏನೂ ಕಾಣಿಸುತ್ತಿರಲಿಲ್ಲ ಎಂದರೆ ಸರಿ. ಮು ಮಾ 3 ಟಾರ್ಚ ನಮಗೆ ಸೇರಿದ್ದು ಎಂದು ಹೇಳಲು ಅದರಲ್ಲಿ ನಿಖರವಾದ ಗುರುತು ಇಲ್ಲ.

( ಮುಂದುವರಿದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)